14. ವರ್ತೂರು ಪೋಲಿಸ್ ಠಾಣೆ

15. ಕಾಡುಗೋಡಿ ಪೋಲಿಸ್ ಠಾಣೆ

16. ವೈಟ್‌ಫೀಲ್ಡ್ ಪೋಲಿಸ್ ಠಾಣೆ.

3523 (4562) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಕಲಾವಿದರಿಗೆ ಮಾಸಾಶನವನ್ನು ನೀಡುತ್ತಿರುವ ವಿಚಾರ ನಿಜವೇ; ಆ ಕಲಾವಿದರ ಸಂಖ್ಯೆ ಎಷ್ಟು; ನೀಡುವ ಮಾಸಾಶನ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) ;

ಆ) ಈ ಮಾಸಾಶನವನ್ನು ಹೆಚ್ಚಿಸಿರುವುದು ನಿಜವೇ; ಈ ನಿಟ್ಟಿನಲ್ಲಿ ಸರ್ಕಾರದ ಕ್ರಮಗಳೇನು;

ಇ) ಕಳೆದ 3 ವರ್ಷಗಳಿಂದ ಈ ಕಲಾವಿದರುಗಳಿಗೆ ಮಾಸಾಶನ ನೀಡದಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರೀತಿ ಎಷ್ಟು ಕಲಾವಿದರಿಗೆ ಮಾಸಾಶನ ಬಾಕಿ ನೀಡಬೇಕಾಗಿದೆ;

ಈ) ಇದುವರೆಗೂ ಮಾಸಾಶನ ನೀಡದಿರಲು ಕಾರಣಗಳೇನು; ಯಾವಾಗ ನೀಡಲಾಗುವುದು ;

ಉ) ಉಳಿದ ಕಲಾವಿದರು ಸಲ್ಲಿಸಿರುವ ಅರ್ಜಿಗಳಿಗೆ ಯಾವ ಕ್ರಮ ಕೈಗೊಳ್ಳಲಾಗುತ್ತದೆ ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) –

ಅ) ಹೌದು.

ಆ) ಇದುವರೆಗೆ 11,415 ಮಂದಿ ಕಲಾವಿದರಿಗೆ ಮಾಸಾಶನ ಮಂಜೂರು ಮಾಡಲಾಗಿದೆ.

ಇ) ಮಾಹೆಯಾನ 500.00ರೂ.ಗಳನ್ನು ನೀಡಲಾಗುತ್ತಿದೆ.

ಈ) ಅನುಬಂಧ ಲಗತ್ತಿಸಿದೆ.

ಉ) ದಿನಾಂಕ; 01.11.2002 ರಿಂದ 250.00 ರೂ.ಗಳ ಮಾಸಾಶನವನ್ನು 500.00 ರೂ.ಗಳಿಗೆ ಏರಿಸಲಾಗಿದೆ.

ಇ) ಅ) ಹೌದು ಆ) ತಜ್ಞರ ಸಮಿತಿಯಿಂದ ಶಿಫಾರಸ್ಸಾಗಿರುವ 1645 ಜನ ಕಲಾವಿದರಿಗೆ ಮಾಸಾಶನ ಮಂಜೂರು ಮಾಡಬೇಕಾಗಿದೆ.

ಈ) ಹೆಚ್ಚುವರಿ ಅನುದಾನವನ್ನು ಕೋರಿದ್ದು, ಕಡತವು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ.

ಉ) ಈಗಾಗಲೇ ಪರಿಶೀಲನೆಯಲ್ಲಿರುವ 1645 ಜನ ಕಲಾವಿದರಿಗೆ ಮಾಸಾಶನ ಮಂಜೂರಾದ ನಂತರ ಉಳಿದ ಕಲಾವಿದರಿಗೆ ನಿಯಮಾನುಸಾರ ಮಾಸಾಶನ ಮಂಜೂರು ಮಾಡಲು ಕ್ರಮಕೈಗೊಳ್ಳಲಾಗುವುದು.

ಅನುಬಂಧ

ಮಾಹೆಯಾನ ರೂ.500/– ಗಳ ಗೌರವಧನ/ಮಾಸಾಶನವನ್ನು ಪಡೆಯುತ್ತಿರುವ ಸಾಹಿತಿ ಕಲಾವಿದರ ಜಿಲ್ಲಾವಾರು ವಿವರಗಳು. (04.02.1975 ರಿಂದ ದಿನಾಂಕ:04.04.2003 ರವರೆಗೆ)

ಕ್ರ.ಸಂ.	ಜಿಲ್ಲೆಗಳ ಹೆಸರು	ಕಲಾವಿದರ ಸಂಖ್ಯೆ
1.	ಬೆಂಗಳೂರು ನಗರ	1578
2.	ಬೆಂಗಳೂರು ಗ್ರಾಮಾಂತರ	610
3.	ಕೋಲಾರ	467
4.	ತುಮಕೂರು	808
5.	ಶಿವಮೊಗ್ಗ	263
6.	ಚಿತ್ರದುರ್ಗ	478
7.	ದಾವಣಗೆರೆ	65
8.	ಮೈಸೂರು	898
9.	ಮಂಡ್ಯ	534
10.	ಹಾಸನ	237
11.	ಚಿಕ್ಕಮಗಳೂರು	104
12.	ಮಂಗಳೂರು (ದ.ಕ.)	327
13.	ಉಡುಪಿ	16
14.	ಚಾಮರಾಜನಗರ	72
15.	ಕೊಡಗು (ಮಡಿಕೇರಿ)	19
16.	ಗುಲ್ಬರ್ಗಾ	210
17.	ಬಿಜಾಪುರ	1049
18.	ಬಾಗಲಕೋಟೆ	566

19.	ಬಳ್ಳಾರಿ	546
20.	ರಾಯಚೂರು	283
21.	ಧಾರವಾಡ	819
22.	ಗದಗ	105
23.	ಹಾವೇರಿ	57
24.	ಕಾರವಾರ (ಉ.ಕ.)	190
25.	ಕೊಪ್ಪಳ	63
26.	ಬೆಳಗಾಂ	882
27.	ಬೀದರ್	145
28.	ಹೊರನಾಡು ಕನ್ನಡಿಗರು (ಕಾಸರಗೋಡು, ದೆಹಲಿ, ಮಹಾರಾಷ್ಟ್ರ)	24
	ಒಟ್ಟು	**11,415**

3524 (4563) – ಶ್ರೀ ಆರ್.ಅಶೋಕ್ (ಉತ್ತರಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ರಸ್ತೆಯ ಅಕ್ಕ–ಪಕ್ಕ ಹಾಗೂ ಇತರೆ ಪಾದಚಾರಿ ಭಾಗಗಳಲ್ಲಿ ಹಳೆಯ ಮರಗಳು ಮಳೆಯ ಆರ್ಭಟದಿಂದಾಗಿ ಬಿದ್ದು ಸಾರ್ವಜನಿಕರಿಗೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದರಿಂದಾಗಿ ಉಂಟಾಗಿರುವ ಸಾವು – ನೋವು ಪ್ರಮಾಣ ಎಷ್ಟು; ಇದಕ್ಕೆ ಕಾರಣಗಳೇನು; ಇವರುಗಳಿಗೆ ನೀಡಿರುವ ಪರಿಹಾರವೇನು ;

ಇ) ಈ ಹಳೆಯ ಮರಗಳನ್ನು ಕಡಿದು ಹಾಕಲಾಗಿದೆಯೇ; ಆ ಮರಗಳು ಬಿದ್ದ ಜಾಗದಲ್ಲಿ ಪುನಃ ಹೊಸ ಮರಗಳನ್ನು (ಸಸಿ) ನೆಡಲಾಗಿದೆಯೇ; (ಎಲ್ಲೆಲ್ಲಿ, ವಿವರ ನೀಡುವುದು) ;

ಈ) ಇದನ್ನು ಯಾವಾಗಿನಿಂದ ಪ್ರಾರಂಭಿಸಲಾಗಿದೆ; ಇದಕ್ಕಾಗಿ ಖರ್ಚಾಗಿರುವ ಹಣವೆಷ್ಟು ?